5. ಶ್ರೀ ಜಿ. ಎನ್. ಗಣೇಶ್‌ಕುಮಾರ್ ಇವರು ನೀಡಿದ ಜಾತಿಪತ್ರದ ಆಧಾರದ ಮೇಲೆ ಪರಿಶಿಷ್ಟ ಬುಡಕಟ್ಟಿನವರೆಂದು ಪರಿಗಣಿಸಿ ಆಯ್ಕೆ ಮಾಡಲಾಗಿತ್ತು. ಆದರೆ ಚಾಮರಾಜನಗರದ ತಹಸೀಲ್ದಾರರ ವರದಿಯ ಮೇರೆಗೆ ಇವರು "ಪರಿವಾರ" ಜಾತಿಗೆ ಸೇರಿರುತ್ತಾರೆ. ಈ ವಿಷಯವನ್ನು ಸರ್ಕಾರವು ವಿಮರ್ಶಿಸಿ ಶ್ರೀ ಗಣೇಶ್‌ಕುಮಾರ್ ರವರನ್ನು ಹಿಂದುಳಿದ ಬುಡಕಟ್ಟಿನವರೆಂದು (ಬಿ.ಟಿ.) ಪರಿಗಣಿಸಲು ಆದೇಶ ನೀಡಿದೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು, ಇವರು ನಾಯಕ್ ಜನಾಂಗಕ್ಕೆ ಸೇರಿದವರಲ್ಲವೆಂದು. ಆದರೆ ನಿಮ್ಮ ನಿಯಮಗಳ ಪ್ರಕಾರ ಇವರು ಯಾವ ಯಾವ ಜನಾಂಗಕ್ಕೆ ಸೇರಿದವರು? ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರು ವೈದ್ಯಕೀಯ ಕಾಲೇಜಿಗೆ ಸೇರಿದ್ದರೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಕುಮಾರಿ ಎಂ. ನಿರ್ಮಲರವರು ಎಸ್.ಟಿ. ಜನಾಂಗಕ್ಕೆ ಸೇರಿದವರಲ್ಲವೆಂದು ಸಮಾಜ ಕಲ್ಯಾಣ ಇಲಾಖೆಯವರು ತಿಳಿಸಿದ್ದರ ಮೇರೆಗೆ ಅವರನ್ನು ವೈದ್ಯಕೀಯ ವಿದ್ಯಾಲಯದಲ್ಲಿ ಆಯ್ಕೆಯಾದ ನಂತರ ರದ್ದುಮಾಡಲಾಯಿತು. ಅವರು ಯಾವ ಯಾವ ಜನಾಂಗಕ್ಕೆ ಸೇರಿದವರು ಎಂಬುದರ ವಿವರ ನನ್ನಲ್ಲಿ ಇಲ್ಲ. ಮುಂದೆ ತಿಳಿಸುತ್ತೇನೆ. ಅವರು ನಾಯಕ್ ಜನಾಂಗಕ್ಕೆ ಸೇರಿದವರಲ್ಲ ಎಂಬುದಾಗಿ ಸಮಾಜಕಲ್ಯಾಣ ಇಲಾಖೆಯವರು ತಿಳಿಸಿದ್ದಾರೆ.

ಶ್ರೀ ಎನ್. ಜಿ. ನಾಯಕ್.—5 ಜನರು ಏನು ಇದ್ದಾರೆ, ಅವರು ಪರಿವಾರ ಜನಾಂಗಕ್ಕೆ ಸೇರಿದವರು. ಪರಿವಾರ ಎಂಬುದು ಸಿನಾನಿಮ್ಸ್ ಆಫ್ ನೇಮ್ಸ್‌ನಲ್ಲಿ ನಾಯಕ್ ಜನಾಂಗಕ್ಕೆ ಸೇರಿದೆ. ಈ ಪರಿಶಿಷ್ಟ ಜನಾಂಗದ ಪಟ್ಟಿ ಏನಿದೆ, ಅದರಲ್ಲಿ ಸಿನಾನಿಮ್ಸ್ ಆಫ್ ನೇಮ್ಸ್ ಯಾವ್ಯಾವುದು ಇದೆ ಅಂದರೆ ಅದರಲ್ಲಿ ಬೋವಿ, ಕಲ್ಲುವಡ್ಡ ಲಂಬಾಣಿ ಎಂಬುದಾಗಿ ಇದೆ. ಅದೇ ರೀತಿ ನಾಯಕ್ ಜನಾಂಗದಲ್ಲೂ ಕೂಡ ಪರಿವಾರ ಎಂಬುದು ಸಿನಾನಿಮ್ಸ್ ಆಫ್ ನೇಮ್ಸ್‌ನಲ್ಲಿ ಬರುತ್ತದೆ. ಆದ್ದರಿಂದ ಈ ಜನವೂ ಕೂಡ ಪರಿವಾರ ಜನಾಂಗಕ್ಕೆ ಸೇರಿದವರು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅವರ ಹತ್ತಿರ ವಿವರ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇದು ಪ್ರತ್ಯೇಕವಾಗಿ ವಿಚಾರವಾಗುತ್ತದೆ. ಈಗ ನಮ್ಮೆಲ್ಲರಿಗೂ ಗೊತ್ತಿರುವ ಹಾಗೆ ನಾಯಕ್ ಜನಾಂಗದಲ್ಲಿ ಕೆಲವು ಸಿನಾನಿಮ್ಸ್ ಆಫ್ ನೇಮ್ಸ್ ಎಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅದರ ಬಗ್ಗೆ ಕಾಂಟ್ರವರ್ಸಿ ಇದೆ. ಹಿಂದಿನ ಸರ್ಕಾರ ಇದರ ಬಗ್ಗೆ 1981–82ರಲ್ಲಿ ಏನೊಂದು ಆಜ್ಞೆಯನ್ನು ಮಾಡಿದ್ದಾರೋ ಆ ಪ್ರಕಾರ ಪ್ರವೇಶವನ್ನು ನಾವು ಕೊಟ್ಟಿದ್ದೇವೆ.

ವಿಷಯ: ಮೈಸೂರಿನಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ.

ಪ್ರ. 262 (83) ಶ್ರೀ ಪಿ. ರಾಮ್‌ದೇವ್ (ಮುಲ್ಲೇಶ್ವರಂ).—ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಸರ್ಕಾರದ ನಿಲುವೇನು;
(ಆ) ಯಾವಾಗ ಈ ಸಮ್ಮೇಳನ ನಡೆಸಲಾಗುತ್ತದೆ;
(ಇ) ಸಮ್ಮೇಳನದ ಗುರಿ ಸಾಧಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು;
(ಈ) ಸಮ್ಮೇಳನಕ್ಕೆ ತಗಲುವ ವೆಚ್ಚವೆಷ್ಟು ಮತ್ತು ಯಾವ್ಯಾವ ಬಾಬ್ತಿಗೆ ಎಷ್ಟು ಖರ್ಚಾಗುತ್ತದೆ?

ಶ್ರೀ ಜೀವರಾಜ ಆಳ್ವ (ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಖಾತೆಯ ರಾಜ್ಯ ಸಚಿವರು).—

(ಅ) (ಆ) ವಿಶ್ವ ಕನ್ನಡ ಸಮ್ಮೇಳನವನ್ನು ದಿನಾಂಕ 1–11–1984 ರಂದು ನಡೆಸಲಾಗುವುದು.
(ಇ) (ಅ) ಶಾಶ್ವತ ಕಟ್ಟಡಗಳ ನಿರ್ಮಾಣ ಮುಂದುವರೆದಿದೆ.
ಸಾಹಿತ್ಯ ಪ್ರಚಾರ:
(ಆ) 117 ಪುಸ್ತಕಗಳ ಪ್ರತಿ ಪುಸ್ತಕದ 5,000 ಪ್ರತಿಗಳನ್ನು ಮುದ್ರಣ ಮಾಡಿ ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸಿದೆ.
(ಇ) ವಿಚಾರ ಸಂಕೀರಣಗಳಲ್ಲಿ ಭಾಗವಹಿಸಲು ಪ್ರಖ್ಯಾತ ವಿದ್ವಾಂಸರನ್ನು ಆಹ್ವಾನಿಸಲಾಗಿದೆ.
(ಈ) ಈಗಾಗಲೇ 2,14,40,112.00 ರೂ.ಗಳು ವೆಚ್ಚವಾಗಿದೆ.
ಇನ್ನು ಮುಂದಿನ ಅಂದಾಜು ವೆಚ್ಚ 500 ರಕ್ಷ ರೂ. (ವಿವರಗಳ ಪಟ್ಟಿಯನ್ನು ಲಗತ್ತಿಸಿದೆ).

ವಿಶ್ವ ಕನ್ನಡ ಸಮ್ಮೇಳನಕ್ಕೆ ಇನ್ನೂ ಬೇಕಾದ ವೆಚ್ಚದ ವಿವರಗಳು :

(1)	ವಿಶ್ವ ಕನ್ನಡ ಸಮ್ಮೇಳನ ನಡೆಸಲು ಆಗುವ ವೆಚ್ಚ (ವಸ್ತುಪ್ರದರ್ಶನ, ಪ್ರಚಾರ, ಸ್ಥಿರಚಿತ್ರಣ, ಮೆರವಣಿಗೆ, ಸ್ಮರಣಸಂಚಿಕೆ ಮುದ್ರಣ, ವಿವಿಧ ಮನರಂಜನೆ ಕಾರ್ಯಕ್ರಮ, ಪೆಂಡಾಲ್ ನಿರ್ಮಾಣ, ಆತಿಥ್ಯ ಇತ್ಯಾದಿ)	140 ಲಕ್ಷ
(2)	17 ಜಿಲೆಗಳಲ್ಲಿ ರಂಗಮಂದಿರ ನಿರ್ಮಾಣದ ವೆಚ್ಚ (ಪ್ರತಿ ರಂಗಮಂದಿರಕ್ಕೆ 10 ಲಕ್ಷ ರೂ.ಗಳಂತೆ)	170 ಲಕ್ಷ
(3)	ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ರಂಗಮಂದಿರ ಪೂರ್ತಿಗೊಳಿಸಲು ಬೇಕಾದ ವೆಚ್ಚ	150 ಲಕ್ಷ
(4)	ಮೈಸೂರಿನಲ್ಲಿ ವಸ್ತುಪ್ರದರ್ಶನ ಕಟ್ಟಡ ನಿರ್ಮಾಣವನ್ನು ಪೂರ್ತಿಗೊಳಿಸಲು ಬೇಕಾದ ವೆಚ್ಚ	30 ಲಕ್ಷ
(5)	ಒಬ್ಬರ ಹಾಗೂ ಇಬ್ಬರು ವಾಸಿಸುವಂತೆ ಒಟ್ಟು 100 ಕೊಠಡಿಗಳ ಹಾಸ್ಟೆಲ್ ನಿರ್ಮಾಣ ಪೂರ್ತಿಗೊಳಿಸಲು ಬೇಕಾದ ವೆಚ್ಚ	10 ಲಕ್ಷ
	ಒಟ್ಟು ವೆಚ್ಚ	500 ಲಕ್ಷ

ವಿಷಯ : ಮೈಸೂರಿನಲ್ಲಿ ನಡೆಯುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ.

ಪ್ರ. 263 (121) ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ), ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ), ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ), ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).— ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕನ್ನಡ ವಿಶ್ವ ಸಾಹಿತ್ಯ ಸಮ್ಮೇಳನ ಜರುಗಿಸಬೇಕೆಂದು ಕಾಡಿಟ್ಟ ಅಂದಾಜು ಹಣ ಎಷ್ಟು ;

(ಆ) ಸದರಿ ಸಮ್ಮೇಳನ ನಡೆಸಲು ಪೂರ್ವಸಿದ್ಧತೆಗಾಗಿ ಇಲ್ಲಿಯವರೆಗೆ ವಿರ್ಚು ಮಾಡಿರುವ ಹಣ ಎಷ್ಟು ;

(ಇ) ಯಾವ ಯಾವ ಬಗೆಯ ಕೆಲಸಗಳಿಗಾಗಿ ಎಷ್ಟೆಷ್ಟು ಹಣ ವಿರ್ಚಾಗಿದೆ (ಪ್ರತಿಯೊಂದು ಕೆಲಸಗಳ ವಿರ್ಚಿನ ವಿವರವಲ್ಲದೆ ಸಾಹಿತಿಗಳಿಗೆ ಏನಾದರೂ ಸಂಭಾವನೆ ಕೊಟ್ಟಿದ್ದರೆ ಅವುಗಳ ವಿವರಗಳನ್ನು ಒದಗಿಸ ಬೇಕಾಗಿ ವಿನಂತಿ);

(ಈ) ಕನ್ನಡ ವಿಶ್ವ ಸಾಹಿತ್ಯ ಸಮ್ಮೇಳನ ನಡೆಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ;

(ಉ) ಹಾಗಿದ್ದಲ್ಲಿ ಸದರಿ ಸಮ್ಮೇಳನವನ್ನು ಯಾವಾಗ ಜರುಗಿಸಲಾಗುವುದು ಮತ್ತು ಈ ಬಗ್ಗೆ ಹಾಕಿ ಕೊಂಡ ಕಾರ್ಯಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಮಾನ್ಯ ಯುವಜನ ಸೇವಾ ಇಲಾಖೆ ಹಾಗೂ ಕ್ರೀಡಾ ರಾಜ್ಯ ಸಚಿವರು) :—

(ಅ) ಹಿಂದೆ ಮಾಡಿದ ಅಂದಾಜು ವೆಚ್ಚ 6·00 ಕೋಟಿ ರೂಪಾಯಿಗಳು.

(ಆ) ರೂ. 2,14,40,112·00.

(ಇ) ಗ್ರಂಥಕರ್ತರಿಗೆ ಸಂಭಾವನೆ ರೂಪದಲ್ಲಿ ಶೇಕಡಾ 15 ರಂತೆ ಇಲ್ಲವೇ ರೂ. 3,000·00ಕ್ಕೆ ಕಡಿಮೆ ಇಲ್ಲದಷ್ಟು ಹಣವನ್ನು ನೀಡಲಾಗಿದೆ. ಸಾಹಿತಿಗಳಿಗೆ ಈ ಸಂದರ್ಭದಲ್ಲಿ ವೆಚ್ಚವಾದ ಒಟ್ಟು ಹಣ 4 ಲಕ್ಷ ರೂಪಾಯಿಗಳು.

(ಈ) ಇದೆ.

(ಉ) ದಿನಾಂಕ 1–11–1984 ರಂದು ನಡೆಸಲಾಗುವುದು. ವಿಚಾರ ಸಂಕಿರಣಗಳು ವಿವಿಧ ಕಲಿಗಳ ಪ್ರದರ್ಶನ ಹಾಗೂ ವಸ್ತು ಪ್ರದರ್ಶನ ವ್ಯವಸ್ಥೆಗೊಳಿಸಬೇಕೆನ್ನುವ ಆಲೋಚನೆ ಇದೆ.

ಶ್ರೀ ಪಿ. ರಾಮ್‌ದೇವ್.—ವಿಶ್ವ ಕನ್ನಡ ಸಮ್ಮೇಳನವನ್ನು ಮಾಡಬೇಕೆಂದು ತೀರ್ಮಾನ ಮಾಡಿದಾಗ ಸರ್ಕಾರದ ಕಲ್ಪನೆ ಏನು ಇತ್ತು ? ಅವರ ಗುರಿ ಏನು ಇತ್ತು ? ಏಕೆಂದರೆ ಅದು ರಾಜಕೀಯದ ಕಲ್ಪನೆಯೋ ಅಥವಾ ಸಂಸ್ಕೃತಿ ಬದಲಾವಣೆಯೋ ಎನ್ನತಕ್ಕಂತಹದ್ದು...

ಅಧ್ಯಕ್ಷರು.—ಅದನ್ನು ಹೇಗೆ ಹೇಳುವುದಕ್ಕಾಗುತ್ತದೆ?

ಶ್ರೀ ಪಿ. ರಾಮ್‌ದೇವ್.—ಹಿಂದೆ ಅಂದಾಜು ಮಾಡಿದ 6 ಕೋಟಿ ಹಣದಲ್ಲಿ ಕೇವಲ ವಸ್ತುಪ್ರದರ್ಶನ, ಪ್ರಚಾರ, ಸ್ಥಿರಚಿತ್ರಣ, ಮೆರವಣಿಗೆ, ಸ್ಮರಣಸಂಚಿಕೆ ಮುದ್ರಣ, ವಿವಿಧ ಮನರಂಜನೆ ಕಾರ್ಯಕ್ರಮ, ಪೆಂಡಾಲ್ ನಿರ್ಮಾಣ, ಆತಿಥ್ಯಕ್ಕಾಗಿ 140 ಲಕ್ಷ ರೂಪಾಯಿಗಳನ್ನು ವಿರ್ಚು ಮಾಡಬೇಕೆಂದರೆ ಕಟ್ಟಡಕ್ಕಾಗಿ 6 ಕೋಟಿ ರೂಪಾಯಿಗಳನ್ನು ವಿರ್ಚು ಮಾಡುತ್ತಿದ್ದಾರೆ. ಯಾವಾಗ ಈ ವಿಶ್ವ ಕನ್ನಡ ಸಮ್ಮೇಳನವಾಗುತ್ತದೆ ? ಎರಡನೆಯದಾಗಿ, ಕಲ್ಪನೆ ಅಂದರೆ ತಮಿಳುನಾಡಿನಲ್ಲಿ ತಮಿಳು ಸಮ್ಮೇಳನ ಮಾಡಿದರು, ಭಾಷಾ ಸರ್ಕಾರ ಬಂತು. ಅದಕ್ಕಾಗಿ ಅವರು ವಿಶ್ವ ತಮಿಳು ಸಮ್ಮೇಳನವನ್ನು ಮಾಡಿದರು. ಅದೇ ರೀತಿ ವಿಶ್ವ ತೆಲುಗು